**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್. 70/2025**

ಸಾಕ್ಷಿಯನ್ನು ದಿಃ **05.06.2026** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1ನೇ ಪ್ರತಿವಾದಿ ಪರಃ ಶ್ರೀ**. CR **ವಕೀಲರಿಂದ**:

ನಾನು SSLC ಓದಿದ್ದೇನೆ ನನಗೆ ಕನ್ನಡ ಇಂಗ್ಲಿಷ್ ಓದಲು ಬರೆಯಲು ಬರುತ್ತದೆ. ನನ್ನ ತಾತನ ಹೆಸರು ಮೂಗೆಗೌಡ. ಅವರ ತಂದೆಯಹೆಸರು ತಿಮ್ಮೇಗೌಡ. ನನ್ನ ತಾತ ಮೂಗೇಗೌಡರಿಗೆ ಎರಡು ಗಂಡು ಮತ್ತು ಎರಡು ಹೆಣ್ಣು ಮಕ್ಕಳು. ಅವರ ಹೆಸರು ಕರೀಗೌಡ, ಶಿವೇಗೌಡ ಹಾಗೂ ಹೆಣ್ಣು ಮಕ್ಕಳ ಪೈಕಿ ಒಬ್ಬರ ಹೆಸರು ಸಾಕಮ್ಮ ಇನ್ನೊಬ್ಬರ ಹೆಸರು ಗೊತ್ತಿಲ್ಲ. ನನ್ನ ತಾತ ಮುಗೇಗೌಡ ಮತ್ತು ಅವರ 4 ಜನ ಮಕ್ಕಳು ತೀರಿಕೊಂಡಿದ್ದಾರೆ. ನನ್ನ ತಂದೆ ಶಿವೇಗೌಡ ದಿಃ 10.09.1983 ರಂದು ತೀರಿಹೋಗಿದ್ದಾರೆ. ಉಳಿದವರು ಯಾವಾಗ ತೀರಿಹೋಗಿದ್ದಾರೆ ಎಂದು ತಾರೀಖು ಸರಿಯಾಗಿ ಗೊತ್ತಿಲ್ಲ. ನನ್ನ ತಾತ ಮುಗೇಗೌಡ ಸುಮಾರು 1981ನೇ ಸಾಲಿನಲ್ಲಿ ತೀರಿಹೋಗಿರಬಹುದು. ಅವರ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಮರಣ ಪ್ರಮಾಣ ಪತ್ರಗಳು ನಮ್ಮ ಬಳಿ ಇಲ್ಲ.

ದಾವಾ ಷೆಡ್ಯೂಲ್ ಸ್ವತ್ತುಗಳು ಮೂಲತಃ ಮುಗೇಗೌಡರಿಗೆ ಸೇರಿದ್ದು. ನನ್ನ ತಾತ ಮುಗೇಗೌಡರಿಗೆ ಹೊನ್ನೆನಹಳ್ಳಿ ಗ್ರಾಮದ ಸರ್ವೇ ನಂಬರ್ 60 ರಲ್ಲಿ 2 ಎಕರೆ 20 ಗುಂಟೆ. ಮರೂರು ಗ್ರಾಮದ ಸರ್ವೇ ನಂಬರ್ 180/1ರ ಲ್ಲಿ 5 ಎಕರೆ, ಅದೇ ಗ್ರಾಮದ ಸರ್ವೇ ನಂಬರ್ 170/2 ಅಥವಾ 7 ರಲ್ಲಿ ಎರಡು ಎಕರೆ 20 ಗುಂಟೆ ಮತ್ತು ಸರ್ವೇ ನಂಬರ್ 170/4 ರಲ್ಲಿ 1 ಎಕರೆ 10 ಗುಂಟೆ ಇತ್ತು. ನನ್ನ ತಾತನ ಹೆಸರಿನಲ್ಲಿ ಮೇಲೆ ಹೇಳಿದ ಜಮೀನು ಇತ್ತು ಎಂಬ ಬಗ್ಗೆ RTC ಹಾಜರುಪಡಿಸಿದ್ದೇನೆ. ಸಾಕ್ಷಿಗೆ ನಿಪಿ ಶ್ರೇಣಿಯ ದಾಖಲೆಗಳನ್ನು ತೋರಿಸಲಾಗಿ ಅದರಲ್ಲ ತನ್ನ ತಾತನ ಹೆಸರಿನಲ್ಲಿರುವ ದಾಖಲೆಗಳು ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾತನ 4 ಮಕ್ಕಳ ಮಧ್ಯೆ ವಿಭಾಗ ಆದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ವಿಭಾಗ ಆಗಿಲ್ಲ. ಅವರು ಯಾರು ಈ ದಾವೆಯಲ್ಲಿ ಪಕ್ಷಗಾರರಲ್ಲ.

ನನ್ನ ದೊಡ್ಡಪ್ಪ ಕರೀಗೌಡರಿಗೆ ಒಟ್ಟು 4 ಜನ ಮಕ್ಕಳು. ಅವರ ಹೆಸರು ವಿಜಯ ಕುಮಾರ್, ಮೀನಾಕ್ಷಿ, ಸುಜಾತ ಮತ್ತು ಕುಮಾರ. ಕರೀಗೌಡರ ಪತ್ನಿಯ ಹೆಸರು ಸೀತಮ್ಮ. ನನ್ನ ತಂದೆ ಶಿವೇಗೌಡರಿಗೆ ಇಬ್ಬರು ಪತ್ನಿಯರು ಅವರ ಹೆಸರು ಮಾಯಮ್ಮ ಮತ್ತು

ಲೋಲಮ್ಮ. ನನಗೆ ಈಗ 45 ವರ್ಷ ವಯಸ್ಸು. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು 44 ಎಂದು ಬರೆಸಿದ್ದೇನೆ. ನನ್ನ ತಂದೆ ಶಿವೇಗೌಡರು ನನ್ನ ತಾಯಿಯನ್ನು ಮದುವೆಯಾಗುವ 9 ವರ್ಷಗಳ ಮೊದಲು ಮಾಯಮ್ಮರವರನ್ನು ಮದುವೆಯಾಗಿದ್ದರು ಎಂದು ಕೇಳಿ ತಿಳಿದುಕೊಂಡಿದ್ದೇನೆ. ನನ್ನ ತಂದೆಗೆ ಮಾಯಮ್ಮರವರನ್ನು ನನ್ನ ತಾತ ಮತ್ತು ಗುರುಹಿರಿಯರೆಲ್ಲಾ ಸೇರಿ ಕಾನೂನು ಬದ್ಧವಾಗಿ ಮದುವೆ ಮಾಡಿದ್ದಾರೆ ಎಂದರೆ ಸರಿ. ಸದರಿ ಮಾಯಮ್ಮರವರಿಗೆ 1ನೇ ಪ್ರತಿವಾದಿ ಒಬ್ಬರೇ ಮಗಳು ಎಂದರೆ ಸರಿ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತುಗಳು ನನ್ನ ತಂದೆಗೆ ಸ್ವಯಾರ್ಜಿತ ಸ್ವತ್ತುಗಳು ಅಲ್ಲ. ನನ್ನ ತಂದೆ ಶಿವೇಗೌಡರು ನನ್ನ ತಾಯಿ ಲೋಲಮ್ಮರವರನ್ನು ನನ್ನ ತಾತ, ದೊಡ್ಡಪ್ಪ ಕರೀಗೌಡ ಮತ್ತು ನನ್ನ ತಂದೆಯ ಮೊದಲನೇ ಪತ್ನಿ ಮಾಯಮ್ಮರವರ ಸಮ್ಮತಿ ಇಲ್ಲದೇ ಕಾನೂನಿಗೆ ವಿರುದ್ದವಾಗಿ ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಎಲ್ಲರೂ ಸೇರಿಯೇ ಮಕ್ಕಳಿರಲಿಲ್ಲ ಎಂಬ ಕಾರಣಕ್ಕಾಗಿ ಮದುವೆ ಮಾಡಿದ್ದಾರೆ. ನನ್ನ ತಂದೆ ನನ್ನ ತಾಯಿಯನ್ನು ಮದುವೆಯಾಗುವ ಮೊದಲೇ ಮಾಯಮ್ಮರವರಿಗೆ 1ನೇಪ್ರತಿವಾದಿ ಜನಿಸಿದ್ದರು ಎಂದರೆ ಸರಿ. ಎಲ್ಲರೂ ಸೇರಿ ನನ್ನ ತಂದೆಗೆ ನನ್ನ ತಾಯಿಯನ್ನು ಮದುವೆ ಮಾಡಿದ್ದಾರೆ ಎಂದು ತೋರಿಸಲು ಲಗ್ನ ಪತ್ರಿಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಅಂತಹ ದಾಖಲೆ ನಮ್ಮ ಬಳಿ ಇಲ್ಲ. ನನ್ನ ತಂದೆ ನನ್ನ ತಾಯಿಯನ್ನು ಎಲ್ಲರ ಸಮ್ಮತಿಯ ಮೇರೆಗೆ ಕಾನೂನು ಬದ್ಧವಾಗಿ ಮದುವೆಯಾಗಿದ್ದಲ್ಲಿ ಲಗ್ನಪತ್ರಿಕೆಯನ್ನು ಹಾಜರುಪಡಿಸುತ್ತಿದ್ದೆ, ಆ ರೀತಿ ಮದುವೆಯಾಗದೇ ಇರುವ ಕಾರಣ ಲಗ್ನ ಪತ್ರಿಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಶಿವೇಗೌಡರು ನನ್ನ ತಾಯಿಯನ್ನು ಹಿರಿಯರ ಒಪ್ಪಿಗೆ ಇಲ್ಲದೇ ಮದುವೆ ಮಾಡಿಕೊಂಡು ಬಂದ ನಂತರ ನನ್ನ ತಾತ ಮುಗೇಗೌಡ,ದೊಡ್ಡಪ್ಪ ಕರೀಗೌಡ ಮತ್ತು ನನ್ನ ತಂದೆಯ ಮೊದಲನೇ ಪತ್ನಿ ಮಾಯಮ್ಮ ನನ್ನ ತಂದೆಯನ್ನು ಮನೆಯಿಂದ ಹೊರಗೆ ಹಾಕಿದರು ಎಂದರೆ ಇಲ್ಲ. ನನ್ನ ತಂದೆ ನನ್ನ ತಾಯಿಯನ್ನು ಮದುವೆಯಾಗುವ ಕಾಲಕ್ಕೆ ಅವರ ಹಿರಿ ಪತ್ನಿಯಿಂದ ವಿವಾಹ ವಿಚ್ಛೇದನೆ ಪಡೆದುಕೊಂಡಿದ್ದರೇ ಎಂದರೆ ಗೊತ್ತಿಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.